ಆ) 31,780 ರೂಪಾಯಿಗಳು ಈ ಯೋಜನೆಯ ಬಗ್ಗೆ ದೂರುಗಳು ಬಂದಿರುವುದರಿಂದ ತನಿಖೆ ಮಾಡಲಾಗುತ್ತಿದೆ.

ಇ) ಕಂದಾಯ ಇಲಾಖೆಯಿಂದ ವರದಿ ಬಂದಕೂಡಲೆ ಪರಿಹಾರ ಕೊಡುವ ಬಗ್ಗೆ ಕ್ರಮ ತೆಗೆದು ಕೊಳ್ಳಲಾಗುತ್ತದೆ.

ವಿಷಯ : ಕಬಿನಿ ಯೋಜನೆಯ ಸುಬ್ಬಲೂರು ಉಪನಾಲೆಯ ಬಗ್ಗೆ

ಪ್ರಶ್ನೆ : 84 (610) ಶ್ರೀ ಟಿ.ಪಿ ಬೋರಯ್ಯ (ಬನ್ನೂರು) .—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕಬಿನಿ ಸುಜ್ಜಲೂರು ಉಪನಾಲಾ ಕೆಲಸ ಪೂರ್ತಿಯಾಗಿದೆಯೇ ;

ಆ) ಹಾಗಿದ್ದಲ್ಲಿ 1984ರ ಜನವರಿಯಲ್ಲಿ ನೀರು ಕೊಡುವ ವ್ಯವಸ್ಥೆ ಮಾಡಲಾಗುವುದೇ ;

ಉತ್ತರ : ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) .— ಅ) ಆಗಿದೆ.

ಆ) 1984ರ ಜನವರಿಯಲ್ಲಿ ನೀರು ಕೊಡುವ ವ್ಯವಸ್ಥೆ ಇಲ್ಲ.

ವಿಷಯ : ಶಿಕಾರಿಪುರ ತಾಲ್ಲೂಕಿನ ಅಂಜನಾಪುರ ಏತ ನೀರಾವರಿ ಯೋಜನೆ

ಪ್ರಶ್ನೆ : 86 (421) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ). — ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಶಿಕಾರಿಪುರ ತಾಲ್ಲೂಕು ಅಂಜನಾಪುರ ಹೋಬಳಿ ಸನ್ಯಾಸಿಕೊಪ್ಪದ ಏತ ನೀರಾವರಿ ಯೋಜನೆ ಈಗ ಯಾವ ಹಂತದಲ್ಲಿದೆ ;

ಆ) ಈ ವರ್ಷವೇ ಈ ಯೋಜನೆಯನ್ನು ಕೈಗೊಳ್ಳುವಂತೆ ಸರ್ಕಾರದವರು ಆದೇಶ ನೀಡುವರೇ?

ಉತ್ತರ : ಶ್ರೀ ಆರ್. ಎನ್. ಲಕ್ಷ್ಮೀಪತಿ (ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ಅಂದಾಜು ಪಟ್ಟಿ ಮತ್ತು ನಕಾಶೆಗಳು ತಯಾರಿಕಾ ಹಂತದಲ್ಲಿವೆ.

ಆ) ಯೋಜನೆಯ ತಾಂತ್ರಿಕ ಮತ್ತು ಆರ್ಥಿಕ ಸಮರ್ಪಕತೆಯನ್ನು ಪರಿಶೀಲಿಸಿದ ನಂತರ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು.

ವಿಷಯ : ಸಿಂಧಗಿ ತಾಲ್ಲೂಕಿನಲ್ಲಿ ಕೃಷ್ಣಮೇಲ್ದಂಡೆ ಯೋಜನೆಯ ಕಾಮಗಾರಿ

ಪ್ರಶ್ನೆ : 87 (488) ಶ್ರೀ ಎನ್. ಆರ್. ಪಾಟೀಲ್ (ಸಿಂಧಗಿ) .— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ : —

ಅ) ಸಿಂಧಗಿ ತಾಲ್ಲೂಕಿನಲ್ಲಿ ಕೃಷ್ಣಮೇಲ್ದಂಡೆ ಯೋಜನೆಯ ಕಾಮಗಾರಿಯು ಸಂಪೂರ್ಣವಾಗಿ ಸ್ಥಗಿತವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಸದ್ಯದ ಪರಿಸ್ಥಿತಿಯಲ್ಲಿ ಮತ್ತೆ ಬರಗಾಲದ ಛಾಯೆ ಕಾಣುತ್ತಿರುವುದರಿಂದ ಸರ್ಕಾರದವರು ಈ ಯೋಜನೆಯ ಕಾರ್ಯ ಪ್ರಾರಂಭಿಸಿ ದುಡಿಯುವ ವರ್ಗಕ್ಕೆ ಕೆಲಸ ನೀಡಲು ಕ್ರಮ ಕೈಕೊಳ್ಳುವರೇ?

ಉತ್ತರ : ಶ್ರೀ ಹೆಚ್. ಡಿ. ದೇವೇಗೌಡ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು) —

ಅ) ಸಿಂಧಗಿ ತಾಲ್ಲೂಕಿನಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಯ ಅಂಗವಾದ ಇಂಡಿ ಉಪ ಕಾಲುವೆಯ ಕೆಲಸವನ್ನು ಬರಗಾಲದ ಕಾಮಗಾರಿಯಲ್ಲಿ 1972-73 ರಿಂದ 1981-82 ರವರೆಗೆ ಮಾಡಲಾಯಿತು. ಈ ಉಪಕಾಲುವೆಯ ಕಾಮಗಾರಿಯನ್ನು ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲನೇ ಘಟ್ಟದ ಎರಡನೇ ಹಂತದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಆ) ಈ ಉಪಕಾಲುವೆಯ ಕಾಮಗಾರಿಯನ್ನು ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲನೇ ಘಟ್ಟದ ಎರಡನೇ ಹಂತದಲ್ಲಿ ಪ್ರಾರಂಭಿಸಲು ಬೇಕಾದ ಪರಿಶೀಲನಾ ಕಾರ್ಯವು ಈಗಾಗಲೇ ಮುಂದುವರೆದಿದೆ.

ವಿಷಯ : ಸಿಂಧಗಿ ತಾಲ್ಲೂಕಿನಲ್ಲಿ ಕೈಗಾರಿಕಾ ಅಭಿವೃದ್ಧಿ ಬಗ್ಗೆ

ಪ್ರಶ್ನೆ : 88(485) ಶ್ರೀ ಎನ್.ಆರ್. ಪಾಟೀಲ್ (ಸಿಂಧಗಿ).— ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸಿಂಧಗಿ ತಾಲ್ಲೂಕು ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಪ್ರದೇಶ ಮತ್ತು ಬರಗಾಲಕ್ಕೆ ಪದೇ ಪದೇ ತುತ್ತಾಗಿ ಯಾವುದೇ ಕೈಗಾರಿಕೆ ಅಭಿವೃದ್ಧಿ ಆಗದೇ ಇರುವ ಪ್ರದೇಶವೆಂಬುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಬಿಜಾಪುರ ಜಿಲ್ಲೆಯ ಜಮಖಂಡಿ ಮತ್ತು ಬಾಗಲಕೋಟೆಗಳಂಥ ಮುಂದುವರೆದ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಸರ್ಕಾರದವರು ಆದೇ ರೀತಿಯಲ್ಲಿ ಸಿಂಧಗಿಯಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಕ್ರಮವನ್ನೇನಾದರೂ ಕೈಗೊಂಡಿದ್ದಾರೆಯೇ;

ಉತ್ತರ : ಶ್ರೀ ಎಸ್.ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).— ಅ) ಹೌದು

ಆ) 1-11-1982 ರಿಂದ ಕೈಗಾರಿಕಾ ಹೂಡಿಕೆಗೆ ಕೊಡಲಾದ ಪ್ರೇರಕ ಮತ್ತು ರಿಯಾಯಿತಿ